# ಹಳಿಯಾಳ: ರಾಷ್ಟ್ರೀಯ ಪರಾಕ್ರಮ ದಿನ ಆಚರಣೆ



ಹಳಿಯಾಳ: ರಾಷ್ಟ್ರೀಯ ಪರಾಕ್ರಮ ದಿನಾಚರಣೆ ಆಚರಿಸಲಾಯಿತು.

■ **ಉದಯವಾಣಿ ಸಮಾಚಾರ**

**ಹಳಿಯಾಳ:** ಪಟ್ಟಣದ ಉದ್ಯೋಗ ವಿದ್ಯಾನಗರದಲ್ಲಿರುವ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಪ್ರತಿಮ ಹೋರಾಟಗಾರ ನೇತಾಜಿ ಸುಭಾಷ್‌ಚಂದ್ರ ಭೋಸ್ ಅವರ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಪರಾಕ್ರಮ ದಿನ ಆಚರಿಸಲಾಯಿತು.

ಸುಭಾಷ್‌ಚಂದ್ರ ಭೋಸ್ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ಸಮರ್ಪಿಸಲಾಯಿತು.

ವಿದ್ಯಾರ್ಥಿಗಳಾದ ಸಂಜನಾ ಶಿವಪುರ ಮಠ, ಮುಸ್ಕಾನ್ ಪಠಾಣ್, ನಾರಾಯಣರಾವ್ ಕುಲಕರ್ಣಿ ರಾಷ್ಟ್ರೀಯ ಪರಾಕ್ರಮ ದಿನದ ಹಿನ್ನೆಲೆ ವಿವರಿಸಿ ನೇತಾಜಿಯವರ ಶಿಸ್ತಿನ ಜೀವನ, ಧೈರ್ಯ ಹಾಗೂ ಸಾಹಸ ಪ್ರವೃತ್ತಿ, ದೇಶಾಭಿಮಾನದ ಕುರಿತು ಮಾತನಾಡಿದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಕೊಡುಗೆ ಅವಿಸ್ಮರಣೀಯ. ಮೂಲತಃ ತೀವ್ರಗಾಮಿ ಹೋರಾಟಗಾರರಾದ ಸುಭಾಷ್ ಚಂದ್ರರು ದೇಶದ ಸ್ವತಂತ್ರಕ್ಕಾಗಿ ಸೈನ್ಯ ಕಟ್ಟಿ ಬ್ರಿಟಿಷರನ್ನು ಹಿಮ್ಮೆಟ್ಟಿಸಲು ಮಾಡಿದ ಸಾಹಸ ಇತಿಹಾಸದ ಪುಟದಲ್ಲಿ ಅಜರಾಮರವಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ। ವಿ.ಎ. ಕುಲಕರ್ಣಿ ವಿವಿಧ ವಿಭಾಗದ ಮುಖ್ಯಸ್ಥರು, ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರೊ।ಕಾರ್ತಿಕ್ ಕುಲಕರ್ಣಿ ಹಾಗೂ ಡಾ।ಸ್ನೇಹಾ ಕುಲಕರ್ಣಿ ಕಾರ್ಯಕ್ರಮ ಸಂಯೋಜಿಸಿದ್ದರು.

# ರಾಷ್ಟ್ರೀಯ ಪರಾಕ್ರಮ ದಿನಾಚರಣೆ

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಪ್ರತಿಮ ಹೋರಾಟಗಾರ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಪರಾಕ್ರಮ ದಿನವನ್ನು ಆಚರಿಸಲಾಯಿತು. ಸುಭಾಷ್ ಚಂದ್ರ ಬೋಸ್ ಅವರ 127ನೇ ಜನ್ಮದಿನದ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ಸಮರ್ಪಿಸಲಾಯಿತು.

ವಿದ್ಯಾರ್ಥಿಗಳಾದ ಸಂಜನಾ ಶಿವಪುರ ಮಠ, ಮುಸ್ಕಾನ್ ಪಠಾಣ್, ನಾರಾಯಣರಾವ್ ಕುಲಕರ್ಣಿ ರಾಷ್ಟ್ರೀಯ ಪರಾಕ್ರಮ ದಿನದ ಹಿನ್ನೆಲೆಯನ್ನು ವಿವರಿಸುತ್ತ, ನೇತಾಜಿಯವರ ಶಿಸ್ತಿನ ಜೀವನ, ಧೈರ್ಯ ಹಾಗೂ ಸಾಹಸ ಪ್ರವೃತ್ತಿ, ದೇಶಾಭಿಮಾನದ ಕುರಿತು ಮಾತನಾಡಿದರು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಕೊಡುಗೆ ಅವಿಸ್ಮರಣೀಯ ಎಂದು ಹೇಳಿದರು. ಮೂಲತಃ ತೀವ್ರಗಾಮಿ ಹೋರಾಟಗಾರರಾದ ಸುಭಾಷ್ ಚಂದ್ರ ಬೋಸ್ ದೇಶದ ಸ್ವತಂತ್ರಕ್ಕಾಗಿ ಸೈನ್ಯ ಕಟ್ಟಿ ಬ್ರಿಟಿಷರನ್ನು ಹಿಮ್ಮೆಟ್ಟಿಸಲು ಗೈದ ಸಾಹಸವು ಇತಿಹಾಸದ ಪುಟದಲ್ಲಿ ಅಜರಾಮರವಾಗಿದೆ ಎಂದರು.

ಈ ಸಂದರ್ಭದಲ್ಲಿ ವಿವಿಧ ವಿಭಾಗದ ಮುಖ್ಯಸ್ಥರು , ಬೋಧಕ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರೊ. ಕಾರ್ತಿಕ್ ಕುಲಕರ್ಣಿ ಹಾಗೂ. ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ರಾಷ್ಟ್ರೀಯ ಪರಾಕ್ರಮ ದಿನ



**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಪ್ರತಿಮ ಹೋರಾಟಗಾರ ನೇತಾಜಿ ಸುಭಾಶ್ಚಂದ್ರ ಬೋಸ್ ಅವರ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಪರಾಕ್ರಮ ದಿನ ಆಚರಿಸಲಾಯಿತು. ಸುಭಾಶ್ಚಚಂದ್ರ ಬೋಸ್ ಅವರ 127ನೇ ಜನ್ಮದಿನದ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ಸಮರ್ಪಿಸಲಾಯಿತು. ವಿದ್ಯಾರ್ಥಿಗಳಾದ ಕು. ಸಂಜನಾ ಶಿವಪುರ ಮಠ, ಕು. ಮುಸ್ಕಾನ್ ಪಠಾಣ್, ನಾರಾಯಣರಾವ್ ಕುಲಕರ್ಣಿ ರಾಷ್ಟ್ರೀಯ ಪರಾಕ್ರಮ ದಿನದ ಹಿನ್ನೆಲೆಯನ್ನು ವಿವರಿಸುತ್ತ, ನೇತಾಜಿಯವರ ಶಿಸ್ತಿನ ಜೀವನ, ಧೈರ್ಯ ಹಾಗೂ ಸಾಹಸ ಪ್ರವೃತ್ತಿ, ದೇಶಾಭಿಮಾನದ ಕುರಿತು ಮಾತನಾಡಿದರು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಕೊಡುಗೆ ಅಸ್ಮರಣೀಯ ಎಂದು ಹೇಳಿದರು. ಮೂಲತಃ ತೀವ್ರಗಾಮಿ ಹೋರಾಟಗಾರರಾದ ಸುಭಾಷ್‌ಚಂದ್ರ ಬೋಸ್ ದೇಶದ ಸ್ವಾತಂತ್ರಕ್ಕಾಗಿ ಸೈನ್ಯ ಕಟ್ಟಿ ಬ್ರಿಟಿಷರನ್ನು ಹಿಮ್ಮೆಟ್ಟಿಸಲು ಗೈದ ಸಾಹಸವು ಇತಿಹಾಸದ ಪುಟದಲ್ಲಿ ಅಜರಾಮರವಾಗಿದೆ ಎಂದು ನುಡಿದರು. ಈ ಸಂದರ್ಭದಲ್ಲಿ ವಿವಿಧ ವಿಭಾಗದ ಮುಖ್ಯಸ್ಥರು, ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರೊ. ಕಾರ್ತಿಕ್ ಕುಲಕರ್ಣಿ ಹಾಗೂ. ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮ ಸಂಯೋಜಿಸಿದ್ದರು ಎಂದು ಪ್ರಾಚಾರ್ಯ ಡಾ. ಎ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.